





# ಸಮುದ್ರ ಕಳೆಯ ಉದ್ಯೋಗಮೇಳ

ಸಮುದ್ರದ ಆಳದಲ್ಲಿ ಸಿಗುವ ಕಳೆಯಲ್ಲಿ ಸ್ವ-ಉದ್ಯೋಗಾವಕಾಶದ ಆಗರವೇ ಅಡಗಿದೆ ಎನ್ನುವುದು ನಿಮಗೆ ಗೊತ್ತಾ?

■ ಸಂತೋಷ್ ರಾವ್, ಪೆರ್ಮುಡ

ಸಮುದ್ರದ ನೀರಿನೊಳಗೆ ಬೆಳೆಯುವ ಒಂದು ರೀತಿಯ ನಿರುಪಯುಕ್ತ ಸಸ್ಯವಿದು. ಸಾಮಾನ್ಯವಾಗಿ ಕೆಂಪು, ಕಂದು ಹಾಗೂ ಹಸಿರು ಬಣ್ಣದ ಆಕಾರರಹಿತ ಸಸ್ಯ ಯಾ ಬಳ್ಳಿಗಳಂತೆ ಬೆಳೆಯುವ ಒಂದು ಪ್ರಬೇಧ. ಇವುಗಳನ್ನು ಮುಂದುವರಿದ ದೇಶಗಳಲ್ಲಿ ಆಹಾರ, ಔಷಧ, ರಸಗೊಬ್ಬರ ಹಾಗೂ ಕೈಗಾರಿಕೆಗಳಿಗೆ ಕಚ್ಚಾಸಾಮಗ್ರಿಗಳಾಗಿ ಬಳಸುತ್ತಾರೆ.

ಸಮುದ್ರ ಕಳೆಯನ್ನು ಸಾಮಾನ್ಯವಾಗಿ ಆಡು ಭಾಷೆಯಲ್ಲಿ ಸೀ ವೀಡ್ ಎನ್ನಲಾಗುತ್ತಿದೆ. ಇವು ಬಹುಕೋಶೀಯ ಪಾಚಿಯ ಪ್ರಬೇಧಕ್ಕೆ ಸೇರಿದ್ದು. ಇವು ವಿವಿಧ ಆಕಾರ, ಗಾತ್ರ, ಬಣ್ಣಗಳ ಪಾಚಿಗಳ ಸಮೂಹವಾಗಿದ್ದು, ಮುಖ್ಯವಾಗಿ ಭೂಮಿಯಲ್ಲಿರುವ ಸಾಮಾನ್ಯ ಸಸ್ಯಗಳ ಪ್ರಬೇಧವೂ ಅಲ್ಲದ, ಸಂಪೂರ್ಣ ಪಾಚಿಯೂ ಅಲ್ಲದ, ಮಧ್ಯದ ಸ್ಥಿತಿಯ ಒಂದು ವಿಧ. ಸಮುದ್ರ ಕಳೆಗಳು ಕಡಲಾಳದೊಳಗಿನ ಕಲ್ಲುಗಳನ್ನು ಆವರಿಸಿಕೊಂಡು ಬೆಳೆಯುತ್ತವೆ. ಆಸ್ಟ್ರೇಲಿಯಾದ ಪೂರ್ವ ಕರಾವಳಿಯಲ್ಲಿ ಯಥೇಚ್ಛವಾಗಿ ಬೆಳೆಯುತ್ತವೆ.

ಸಮುದ್ರ ಕಳೆಗಳು ಬೆಳೆಯಲು ಸಾಮಾನ್ಯವಾಗಿ ಹೇರಳವಾದ ಸೂರ್ಯಕಿರಣ, ಉಪ್ಪು ನೀರು ಅಥವಾ ಕೆಸರು ನೀರು ಅಗತ್ಯವಿದೆ. ತನ್ನ ದ್ಯುತಿಸಂಶ್ಲೇಷಣೆ ಪ್ರಕ್ರಿಯೆಯನ್ನು ನೀರಿನೊಳಗೆಯೇ ನಡೆಸಿ ಬೆಳೆಯುವ ವಿಭಿನ್ನ ಗುಣವನ್ನು ಇವು ಹೊಂದಿವೆ. ಸಮುದ್ರ ಕಳೆ ಎರಡು ರೀತಿಯ ಭಿನ್ನ ಪರಿಸರಗಳಲ್ಲಿ ಬೆಳೆಯುತ್ತವೆ. ಮೊದಲನೆಯದು ಉಪ್ಪು ಮತ್ತು ಕೆಸರು ನೀರಿನಲ್ಲಿ ತೇಲಿಕೊಂಡು ಬೆಳೆದರೆ, ಎರಡನೆಯದು ಸಾಗರದಾಳದ ಕಲ್ಲುಗಳಿಗೆ ಅಂಟಿಕೊಂಡು ಸ್ಥಿರವಾಗಿ ಬೆಳೆಯುತ್ತವೆ.

ಆಳ ಸಮುದ್ರದ ತೀರಗಳಲ್ಲಿ ಕಲ್ಲಿನಿಂದ ಆವೃತವಾದ ಕಡೆ ಮತ್ತು ಮರಳಿನಲ್ಲಿ ಹೆಚ್ಚು ದಟ್ಟವಾಗಿ ಇವು ಬೆಳೆಯುತ್ತವೆ. ಸಮುದ್ರ ಕಳೆಯ ಒಂದು ಸೂಕ್ಷ್ಮ ಜೀವಕೋಶವು ಒಂದೆಡೆ ನೆಲೆಗೊಂಡರೆ ಸಾಕು, ಅತ್ಯಂತ ವೇಗವಾಗಿ ಎಲ್ಲೆಡೆ ಹರಡುತ್ತದೆ. ಸಮುದ್ರ ಕಳೆಗಳು ಎತ್ತರದ ಸಮುದ್ರದ ದಂಡೆಗಳಲ್ಲಿ ಬೆಳೆಯುತ್ತವೆಯಾದರೂ, ಇದಕ್ಕೆ ನಿರಂತರವಾಗಿ ಸಮುದ್ರದ ಅಲೆಗಳ ನೀರಿನ ಸಿಂಚನದ (ಅಧಿಕ ತೇವಾಂಶ) ಅವಶ್ಯಕತೆ ಇದೆ. ಸಮುದ್ರದ ಆಳದಲ್ಲಿ ಇದು ಹಲವಾರು ಮೈಲಿಗಳಷ್ಟು ದೂರಕ್ಕೆ ವ್ಯಾಪಿಸಿರುತ್ತವೆ. ಮುಖ್ಯವಾಗಿ ಸೂರ್ಯನ ಬೆಳಕಿನ ಪ್ರಖರತೆಯನ್ನು ಅವಲಂಬಿಸಿದೆ.

## ಆಹಾರವಾಗಿ ಬಳಕೆ

ಸಮುದ್ರ ಕಳೆಯನ್ನು ಜಪಾನ್, ಚೀನಾ, ಕೊರಿಯಾ, ತೈವಾನ್, ಸಿಂಗಾಪೂರ, ಥಾಯ್ಲಂಡ್, ಮ್ಯಾನ್‌ಮಾರ್, ಕಾಂಬೋಡಿಯ, ವಿಯೆಟ್ನಾಂ, ಇಂಡೊನೇಷ್ಯಾ, ಫಿಲಿಪ್ಪೀನ್ಸ್, ಮಲೇಷ್ಯಾ, ಪೆರು, ಚಿಲಿ, ಐರ್ಲೆಂಡ್,